ಬೀಳಗಿ ಕ್ಷೇತ್ರದ ಅನಗವಾಡಿ ಸೇತುವೆ ನಿರ್ಮಾಣ

೭೧. ಶ್ರೀ ಬಾಬುರೆಡ್ಡಿ ತಂಗಳ್, (ಬೀಳಗಿ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ—ಸೊಲ್ಲಾಪುರ ಹೆದ್ದಾರಿಯಂ ಮೇಲಿರುವ ಘಟಪ್ರಭಾ ನದಿಗೆ ಅಡ್ಡಲಾಗಿ ಅನಗವಾಡಿಯ ಬಳಿ ಸೇತುವೆಗೆ ಶಂಕು ಸ್ಥಾಪನೆ ಮಾಡಲಾಗಿದೆಯೇ ?

ಆ) ಇಲ್ಲಿ ಸೇತುವೆ ನಿರ್ಮಿಸಲು ಅಂತಿಮವಾಗಿ ಅಂದಾಜು ಮಾಡಿರುವ ಹಣವೆಷ್ಟು ?

ಇ) ಈ ಕೆಲಸವು ವಿಳಂಬವಾಗಿರುವುದಕ್ಕೆ ಕಾರಣಗಳೇನು ? ಹಾಗೂ ಸೇತುವೆಯ ನಿರ್ಮಾಣ ಕಾರ್ಯವು ನಿಶ್ಚಿತವಾಗಿ ಆರಂಭವಾಗುವುದು ಯಾವಾಗ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೌದು ಮಾಡಲಾಗಿದೆ.

ಆ) ೨೬೭ ಲಕ್ಷ ರೂಪಾಯಿಗಳು.

ಇ) ಈ ಕೆಲಸವನ್ನು ವಿಶ್ವಬ್ಯಾಂಕ್ ನೆರವಿನಿಂದ ಕೈಗೊಳ್ಳಬೇಕಾದ ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಎರಡನೆ ಹಂತದಲ್ಲಿ ಸೇರಿಸಲಾಗಿದೆ. ಯೋಜನಾ ವರದಿಗೆ ವಿಶ್ವಬ್ಯಾಂಕಿನ ಅನುಮೋದನೆ ದೊರೆತ ನಂತರ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಆಲಮಟ್ಟಿ ಅಣೆಕಟ್ಟಿ ಯೋಜನೆಗೆ ಸರ್ಕಾರದವರು ಖರ್ಚು ಮಾಡಿದ ಹಣದ ಬಗ್ಗೆ

೯೪. ಶ್ರೀ ಎಸ್. ಜಿ. ನಂಜಯ್ಯನವಂಠ, (ಗುಳೇದಗುಡ್ಡ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಅಣೆಕಟ್ಟಿ ಯೋಜನೆಗೆ ಈ ವರೆವಿಗೆ ಒಟ್ಟು ಖರ್ಚಾಗಿರುವ ಹಣವೆಷ್ಟು ?

ಆ) ೧೯೮೦ ರಿಂದ ಇಲ್ಲಿಯವರೆಗೆ ಪ್ರತಿವರ್ಷ ಎಷ್ಟು ಖರ್ಚಾಗಿದೆ, ಆ ಪೈಕಿ ಪುನರ್‌ವಸತಿಗೆ ಆದ ಖರ್ಚು ಎಷ್ಟು ?

ಇ) ನಿರಾತಂಕವಾಗಿ ಪ್ರತಿವರ್ಷ ಆದಕ್ಕೆ ಬೇಕಾದ ಹಣವನ್ನು ಒದಗಿಸಿದಲ್ಲಿ ಈ ಯೋಜನೆ ಯಾವ ವರ್ಷದಲ್ಲಿ ಪೂರ್ಣಗೊಳ್ಳುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಡಿಸೆಂಬರ್ ೧೯೮೨ರ ಕೊನೆಯವರೆಗೆ ಆಲಮಟ್ಟಿ ಅಣೆಕಟ್ಟಿಗೆ ಖರ್ಚಾದ ಹಣ ರೂ. ೪೩೫.೮೫ ಲಕ್ಷ.